# ಕಷ್ಟ-ಒಂದು ಅನಿಸಿಕೆ

**ಸೀತಾ ನಾಗರಾಜ್**

*ಕಷ್ಟ, ಯಾರಿಗೆ ಬರುವುದಿಲ್ಲ? ವ್ಯಕ್ತಿಗೆ ಕಷ್ಟ, ನೋವುಗಳು ಎದುರಾದಾಗ ಎಂತಹ ಮನೋಭಾವ ತಾಳಬೇಕು ಎಂಬುದನ್ನು ಕುರಿತ ಕೆಲವು ಚಿಂತನೆಗಳನ್ನು ಹಂಚಿಕೊಂಡಿರುವ ಶ್ರೀಮತಿ ಸೀತಾ ನಾಗರಾಜ್ ಅವರು ಬೆಂಗಳೂರು ರಾಮಕೃಷ್ಣ ಮಠದ ಭಕ್ತರು.*

**ಜೀ**ವಿತದ ಅವಧಿಯಲ್ಲಿ ಯಾರಿಗೂ ಬೇಡವಾದ ಎಲ್ಲರಿಗೂ ಅನಿವಾರ್ಯವಾದ ಒಂದು ಸ್ಥಿತಿ ಎಂದರೆ ಕಷ್ಟ. ಅಧ್ಯಾತ್ಮದ ಚಿಂತನೆಯೇ ಪ್ರಮುಖ ಅಂಶವಾಗಿರುವ ಈ ಪತ್ರಿಕೆಯಲ್ಲಿ ಕಷ್ಟದ ಬಗ್ಗೆ ಏಕಪ್ಪಾ ಬರೆಯಲು ಹೊರಟರು ಎಂದು ಕೆಲವರಿಗೆ ಅನಿಸಬಹುದು. ಆದರೆ ಅಧ್ಯಾತ್ಮ ಹುಟ್ಟುವುದೇ ಮನುಷ್ಯನಿಗೆ ಕಷ್ಟ ಬಂದಾಗ ಎನ್ನುವುದು ನೂರಕ್ಕೆ ಎಪ್ಪತ್ತೈದರಷ್ಟಾದರೂ ನಿಜ. ಇನ್ನು ಉಳಿದವರು ನಿತ್ಯಸಿದ್ಧರು. ಹುಟ್ಟಿನಿಂದಲೇ ಭಗವಂತನಿಗೆ ತಮ್ಮನ್ನು ತಾವು ಅರ್ಪಿಸಿಕೊಂಡಿರುವರು. "ಸಂಕಟ ಬಂದಾಗ ವೆಂಕಟರಮಣ" ಎನ್ನುವ ಮಾತು ಮೇಲ್ನೋಟಕ್ಕೆ ಸ್ವಲ್ಪ ಹಗುರವೆನಿಸಿದರೂ ಅದರಲ್ಲಿ ಸತ್ಯಾಂಶವಂತೂ ಇದ್ದೇ ಇದೆ. ಆದರೆ ಸಂಕಟ ತೀರಿದಮೇಲೆ ನಾವು ವೆಂಕಟರಮಣನನ್ನು ಬಿಡಬಾರದು ಅಷ್ಟೆ. ಏಕೆಂದರೆ ಮುಂದಿನ ಕಷ್ಟಕ್ಕೆ ಮಾನಸಿಕ ಸಿದ್ಧತೆ ಮಾಡಿಕೊಳ್ಳುವುದರ ಜೊತೆಗೆ ಮಾನಸಿಕ ಶಕ್ತಿಯನ್ನೂ ನಾವು ಭಗವಂತನಿಂದಲೇ ಪಡೆದುಕೊಳ್ಳಬೇಕು.

ಕರೆದು ಆದರಿಸುವವರಿಲ್ಲ, ಒಳಗೆ ಬಾ ಎನ್ನುವವರಿಲ್ಲ, ಬಂದರೆ ಉಪಚರಿಸುವವರಿಲ್ಲ, ಆರತಿ ಬೆಳಗುವವರಿಲ್ಲ; ಆದರೂ ತನ್ನಷ್ಟಕ್ಕೆ ತಾನೇ ಮನೆ ಒಳಗೆ ಪ್ರವೇಶಿಸಿ, ತನ್ನ ಅಸ್ತಿತ್ವವನ್ನು ಸ್ಥಿರಗೊಳಿಸಿ, ಕೊನೆಗೆ ಎಲ್ಲರ ಮೇಲೆ ತನ್ನ ಅಧಿಪತ್ಯ ನಡೆಸಿ, ಬೇಕೆಂಬಷ್ಟು ದಿನವಿದ್ದು ಎಲ್ಲರನ್ನೂ ಹಣ್ಣು ಹಣ್ಣು ಮಾಡಿ, ಕೊನೆಗೆ ತನಗೇ ಬೇಸರವಾಗಿ ಬೇರೊಬ್ಬ ಅತಿಥಿಯನ್ನು ಹುಡುಕಿಕೊಂಡು ಹೋಗುವ ಈ ಕಷ್ಟ—ಪ್ರತಿಯೊಬ್ಬರ ಜೀವನದಲ್ಲಿಯೂ ಒಳ್ಳೆಯ ಪಾಠ ಕಲಿಸುತ್ತದೆ.

ಪ್ರಪಂಚದಲ್ಲಿ ಈ 'ಕಷ್ಟ'ಕ್ಕೆ ಸಿಲುಕಿಹಾಕಿಕೊಳ್ಳದವರು ಯಾರಾದರೂ ಇದ್ದಾರೆಯೇ? ಸಾವು ಎಷ್ಟು ಅನಿವಾರ್ಯವೋ ಈ ಕಷ್ಟವೂ ಅಷ್ಟೇ ಅನಿವಾರ್ಯ. ಸಾಕ್ಷಾತ್ ಭಗವಂತನಿಂದ ಹಿಡಿದು ದೇವತೆಗಳು, ದೇವಗಣಗಳು, ಋಷಿಮುನಿಗಳು, ರಾಜಮಹಾರಾಜರುಗಳು, ಯಕ್ಷರು, ಗಂಧರ್ವರು, ಸಿರಿವಂತರು, ಬಡವರು, ಕವಿಗಳು, ಸಾಹಿತಿಗಳು ಹೇಳುತ್ತಾ ಹೋದರೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಸತ್ಯಾಂಶವೇನೆಂದರೆ ಯಾವ ಜೀವಿಯೂ ಇದರ ಸುಳಿಯಿಂದ ತಪ್ಪಿಸಿಕೊಳ್ಳುವಂತಿಲ್ಲ.

ಕ್ಷೀರಸಾಗರದಲ್ಲಿ ಪವಡಿಸಿದ ಲಕ್ಷ್ಮೀನಾರಾಯಣನೂ ಭೃಗು ಮುನಿಯ ಕಾಲಿನ ಒದೆತ ತಿಂದು, ವಿರಹತಪ್ತನಾಗಿ ಲಕ್ಷ್ಮೀವಿಹೀನನಾಗಿ ಇಳೆಗೆ ಇಳಿದು ಬರಬೇಕಾಯ್ತು. ಸಾಕ್ಷಾತ್ ಪರಮೇಶ್ವರನೂ ಕಪಾಲ ಹಿಡಿದು ಭಿಕ್ಷೆ ಬೇಡುವಂತಾಯ್ತು. ಇನ್ನು ನಮ್ಮ ಸೃಷ್ಟಿಕರ್ತ ಬ್ರಹ್ಮನಿಗಂತೂ ಪೂಜೆಯೇ ಇಲ್ಲದ ಕರುಣಾಜನಕ ಸ್ಥಿತಿ. ಈ ತ್ರಿಮೂರ್ತಿಗಳದೇ ಈ ಪಾಡಾದರೆ ಮಿಕ್ಕವರದೇನು ಲೆಕ್ಕ!

## ಕಷ್ಟದಿಂದ ಪಾರಾಗುವ ಅತ್ಯುತ್ತಮ ಮಾರ್ಗ ಅದರ ಮೂಲಕ ಸಾಗುವುದು —*ಅನಾಮಿಕ*

ಸತ್ಯದ ಸಾಕಾರಮೂರ್ತಿ ಎಂದೇ ಖ್ಯಾತರಾದ 'ಸತ್ಯ ಹರಿಶ್ಚಂದ್ರ' ಇಡೀ ಜಗತ್ತಿಗೇ ಸತ್ಯದ ಮಹಿಮೆ, ಅದರ ಅರ್ಥ, ಅದರ ಆಳವನ್ನು ತಿಳಿಸಿಕೊಡಲಿಕ್ಕೆ ಏನೆಲ್ಲ ಕಷ್ಟ ಪಡಬೇಕಾಯಿತು. ಮಹಾರಾಜ್ಞಿಯಾಗಿ ಸುಖದ ಮೇರುಸ್ಥಿತಿಯಲ್ಲಿದ್ದ ರಾಣಿ ಚಂದ್ರಮತೀ ಬೇರೊಬ್ಬನ ಮನೆಯಲ್ಲಿ ಪರಿಚಾರಿಕೆಯಾಗಿ ದುಡಿಯುವಂತಾದದ್ದು ಎಂಥ ವಿಪರ್ಯಾಸ ! ರಾಜಕುವರ. ಅರಮನೆಯ ವೈಭವದ ಸವಿಯನ್ನುಂಡ ಎಳೆಯ ಲೋಹಿತಾಶ್ವ ಸಾಮಾನ್ಯರ ಮನೆಯ ಬಾಲಕನಿಗಿಂತಲೂ ಕಡೆಯಾಗಿ ಕಾಡಿನಲ್ಲಿ ಕಟ್ಟಿಗೆ ಕಡಿದು, ತಲೆಯ ಮೇಲೆ ಹೊರೆಯನ್ನು ತರುವ ದೃಶ್ಯ ಒಮ್ಮೆ ಕಣ್ಣಮುಂದೆ ತೇಲಿಬಂದರೆ ಎಂತಹ ಕಟುಕನ ಹೃದಯವೂ ಕರಗುವುದಿಲ್ಲವೇ! ಇನ್ನು ರಾಜ ಹರಿಶ್ಚಂದ್ರನ ಸ್ಥಿತಿಯಂತೂ ಬೇಡವೆ ಬೇಡ. ಅತ್ಯಂತ ಜನಾನುರಾಗಿ ಮಹಾರಾಜ ಕಡೆಗೆ ಸ್ಮಶಾನವನ್ನು ಕಾದದ್ದಲ್ಲದೆ, ತನ್ನ ಮಗನ ಶವಸಂಸ್ಕಾರಕ್ಕೆ ಕಾಸಿಲ್ಲದೆ ಸ್ವಯಂ ಪತ್ನಿಯ ಶಿರಚ್ಛೇದನ ಮಾಡುವಂಥ ದಾರುಣ ಸ್ಥಿತಿ. ಇಡೀ ಸೃಷ್ಟಿಯ ಇತಿಹಾಸದಲ್ಲೇ ಹರಿಶ್ಚಂದ್ರನಷ್ಟು ಕಷ್ಟಪಟ್ಟ ವ್ಯಕ್ತಿ ಮತ್ತೊಬ್ಬನಿಲ್ಲ. ಕಡೆಗೆ ಕಷ್ಟವನ್ನೊಡ್ಡಿದ ವಿಶ್ವಾಮಿತ್ರನೇ ಸೋತು ಸುಣ್ಣವಾಗಬೇಕಾಯಿತು. ಮುಂದೆ ಆ ಮುನಿಯ ಬತ್ತಳಿಕೆಯಲ್ಲಿ ಹರಿಶ್ಚಂದ್ರನನ್ನು ಸೋಲಿಸಲು ಯಾವ ಬ್ರಹ್ಮಾಸ್ತ್ರವೂ ಬಾಕಿ ಇರಲಿಲ್ಲ. ವಿಶೇಷವೆಂದರೆ ಹರಿಶ್ಚಂದ್ರ ಮಾತ್ರ ಅಗ್ನಿಪರೀಕ್ಷೆಯಲ್ಲಿ ಪುಟವಿಟ್ಟ ಚಿನ್ನದಂತೆ ಹೊರಬಂದದ್ದು. ಅದುವರೆವಿಗೂ ರಾಜ ಹರಿಶ್ಚಂದ್ರನಾದವನು ನಂತರ 'ಸತ್ಯ ಹರಿಶ್ಚಂದ್ರ'ನಾದನು. ಎಲ್ಲವೂ ಮಂಗಳ, ಸನ್ಮಂಗಳ.

ಇನ್ನು ಪಾಂಡವರು ಪಟ್ಟ ಕಷ್ಟವೇನು ಕಡಮೆಯೇ? ಚಿಕ್ಕಂದಿನಲ್ಲೇ ತಂದೆ ಪಾಂಡುವನ್ನು ಕಳೆದುಕೊಂಡು ದೊಡ್ಡಪ್ಪನ ಆಶ್ರಯಕ್ಕೆ ಬಂದವರು. ತಾಯಿ ಕುಂತಿ ಅತ್ಯಂತ ಸ್ವಾಭಿಮಾನಿ

ಮಹಿಳೆ. ಎಂಥ ಕಷ್ಟದಲ್ಲೂ ಧೃತಿಗೆಡದೆ ಮಕ್ಕಳನ್ನು ಸುಸಂಸ್ಕೃತರನ್ನಾಗಿ ಬೆಳೆಸಿದಳು. ಒಬ್ಬೊಬ್ಬ ಮಕ್ಕಳದೂ ಒಂದೊಂದು ವಿಶೇಷ ಗುಣ. ಯುಧಿಷ್ಠಿರ ನಡೆಸಿದ ಜೀವನವೇ ಒಂದು ಪಥವಾಗಿ ಧರ್ಮಪಥವಾಯಿತು. ಧರ್ಮರಾಯ ಎನ್ನುವ ಹೆಸರೇ ಅನ್ವರ್ಥನಾಮವಾಯಿತು. ಅರ್ಜುನ ತ್ರಿಲೋಕವಿಜಯಿಯಾದರೆ, ಸಹದೇವ ತ್ರಿಲೋಕಜ್ಞಾನಿ. ಇನ್ನು ಭೀಮಪರಾಕ್ರಮವಾಗಲಿ, ಭೀಮಪಾಕವಾಗಲಿ ಜಗತ್ಪ್ರಸಿದ್ಧ. ಆ ತಾಯಿಗೆ, ಈ ಮಕ್ಕಳಿಗೆ ಸಾಕ್ಷಾತ್ ಕೃಷ್ಣನ ರಕ್ಷಾಕವಚವಿದ್ದರೂ ಅದೆಷ್ಟು ಕಷ್ಟ, ಅದೆಂಥಾ ವನವಾಸ, ಅದೇನು ಅಜ್ಞಾತವಾಸ. ವಿಷದ ಲಡ್ಡುಗೆಯ ಊಟ, ಅರಗಿನ ಮನೆಯ ವಾಸ! ಪಾಂಡವರು ಕಾಲಿಟ್ಟ ಎಡೆಯಲೆಲ್ಲ ದುರ್ಯೋಧನನ ಕಾಟ. ಪಾಂಡವರು ಎಲ್ಲ ತೊಂದರೆಗಳಿಂದ ಪಾರಾಗಿ, ಪುಟವಿಟ್ಟ ಚಿನ್ನದಂತಾಗಬೇಕಾದರೆ ಹಲವಾರು ವರ್ಷಗಳೇ ಬೇಕಾಯಿತು. **ಯೋಗಕ್ಷೇಮಂ ವಹಾಮ್ಯಹಂ** ಎನ್ನುವ ಭಗವಂತನ ಭರವಸೆಯ ನುಡಿ ಪಾಂಡವರಿಗೆ ಮಾತ್ರ ಸೀಮಿತವಲ್ಲ, ಯಾರು ಅವನಲ್ಲಿ ಶರಣಾಗುತ್ತಾರೋ ಅವರಿಗೆಲ್ಲ ಅಭಯವಚನವಿದ್ದಂತೆ. ಪಾಂಡವರು ಪಟ್ಟ ಕಷ್ಟದ ಹಿನ್ನೆಲೆಯಲ್ಲಿ ಜಗತ್ಕಲ್ಯಾಣವಿದೆ. ಮಾನವ ಜೀವಿಗಳ ಹಿತಾಸಕ್ತಿ ಇದೆ. ದುಷ್ಟನಿಗ್ರಹವಿದೆ. ಶಿಷ್ಟರಿಗೆ ರಕ್ಷಣೆ ಇದೆ. ಇನ್ನು ಬಾಲಕ ಧ್ರುವ, ಪ್ರಹ್ಲಾದ, ಅಹಲ್ಯೆ, ಸ್ವಲ್ಪ ಮುಂದೆ ಬಂದರೆ ಯಶೋಧರಾ (ಸಿದ್ಧಾರ್ಥನ ಪತ್ನಿ), ಇನ್ನೂ ಈಚೆಗೆ ಬಂದರೆ ಕಸ್ತೂರಿ ಬಾ—ಇವರೆಲ್ಲ ಕಡಮೆ ಕಷ್ಟಪಟ್ಟವರೇ?

ಅಷ್ಟೆಲ್ಲಾ ಏಕೆ, ಅಲ್ಲಿ ಇಲ್ಲಿ, ಹೋಗುವುದೇ ಬೇಡ. ತಾಯಿ ಶ್ರೀಶಾರದಾದೇವಿಯವರ ಜೀವನ ಮಾದರಿಯೇ ಸಾಕು. ೮ x ೮ ಅಡಿ ಅಳತೆಯ ಒಂದು ಪುಟ್ಟಕೋಣೆಯಲ್ಲಿ ವಾಸ. ಅಲ್ಲೇ ಅಡಿಗೆಯ ಮನೆ. ಅದೇ ಪೂಜಾಮಂದಿರ, ಅತಿಥಿಗಳ ಕೋಣೆಯೂ ಅದೇ. ಆ ತಾಯಿ ಅಷ್ಟೆಲ್ಲವನ್ನೂ ಅದೆಷ್ಟು ತಾಳ್ಮೆಯಿಂದ ನಿಭಾಯಿಸುತ್ತಾರೆ! ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ಪತಿಯ ಆದೇಶದಂತೆ ತಮ್ಮ ಸ್ವಂತ ಊರಾದ ಕಾಮಾರಪುಕುರಕ್ಕೆ ಹೋಗಿ ಒಂಟಿಯಾಗಿ ಜೀವನ ನಡೆಸುತ್ತಾರೆ. ಮನೆಯ ಮುಂದೆ ಇರುವ ಸ್ವಲ್ಪ ಜಾಗದಲ್ಲಿ ಸೊಪ್ಪು ಬೆಳೆದು, ಉಪ್ಪೂ ಇಲ್ಲದೆ ಬೇಯಿಸಿಕೊಂಡು ತಿಂದ ದಿನಗಳದೆಷ್ಟು. ಉಡಲು ಸೀರೆಯೂ ಇಲ್ಲದೆ ಹರಿದುಹೋದ ಸೀರೆಯನ್ನು ಹೊಲಿಯಲೂ ಆಗದೆ ಗಂಟುಗಂಟಿನ ಸೀರೆಯಲ್ಲೇ ಕಳೆದ ದಿನಗಳದೆಷ್ಟು? ಅಷ್ಟೂ ಸಾಲದೆಂಬಂತೆ ಆ ರಾಧೆ, ಸುರಬಾಲೆ, ಸೋದರರು ಇವರೆಲ್ಲರಿಂದ ಅವರು ಅನುಭವಿಸಿದ ನೋವೆಷ್ಟು! "ಅಳು ನುಂಗಿ ನಗು ಒಮ್ಮೆ" ಎನ್ನುವ ಮಾತು ಆ ತಾಯಿಗೆ ನೂರಕ್ಕೆ ನೂರರಷ್ಟು ಅನ್ವಯಿಸುತ್ತದೆ. ಈ ಪರೀಕ್ಷೆಯಲ್ಲಿ ಮೊದಲ ರ್‍ಯಾಂಕ್ ವಿಜೇತರವರು. ಸ್ವಯಂ ಶ್ರೀರಾಮಕೃಷ್ಣರಿಂದಲೇ ಮೆಚ್ಚುಗೆ ಪಡೆದವರು ಅವರು. ಅವರು ಪಟ್ಟ ಪಾಡು ಪಾಡಲ್ಲ, ಬೇರೆಯವರಿಗೆ ಅದೊಂದು ಪಾಠ, ಅದೊಂದು ಮಾರ್ಗ, ಅದೊಂದು ಆದರ್ಶ. ನಿತ್ಯನಿರಂತರ ಪ್ರವಹಿಸುವ "ಜೀವನಗಂಗೆ"ಯಾಯಿತು, ಅವರ ಜೀವನ. ಅವರದು ಮುಗಿದ ಜೀವನವಲ್ಲ, ಮಾಗಿದ ಜೀವನ.

**ಕಷ್ಟಗಳನ್ನು ಕಂಡು ಅಂಜಬೇಡಿ. ನಮ್ಮೊಳಗಿರುವ ಸಾಮರ್ಥ್ಯಗಳನ್ನು ಕಷ್ಟಕಾಲಗಳೇ ಹೊರಗೆ ತರುವವುಗಳಾಗಿವೆ.**
*—ಥಾಮಸ್. ಎ. ಕೆಂಪಿಸ್*

ಕಷ್ಟನೋವುಗಳ ಗಾಳಕ್ಕೆ ಸಿಕ್ಕಿ ನಲುಗುವುದು ಮನುಷ್ಯರನ್ನು ಬಿಟ್ಟಿದ್ದಲ್ಲ. ದುಷ್ಟರಿಗೆ, ಕುಹಕಿಗಳಿಗೆ ಕಷ್ಟಗಳು ಒದಗಿದರೂ ಆ ಕಷ್ಟಗಳು ತಮ್ಮನ್ನು ಸನ್ಮಾರ್ಗದಲ್ಲಿ ನಡೆಯುವಂತೆ ಮಾಡುವ ಪ್ರೇರಕ ಶಕ್ತಿಗಳು ಎಂದು ಅವರು ಭಾವಿಸುವುದಿಲ್ಲ. ಸಜ್ಜನರಿಂದ ಪಾಠ ಕಲಿಯುವುದು ಅವರಿಗೆ ಬೇಕಾಗಿಲ್ಲ. ಇದರಿಂದ ಅವರು ತಮ್ಮ ಗುಂಡಿಯನ್ನು ತಾವೇ ತೋಡಿಕೊಂಡು ತಮ್ಮ ಸರ್ವನಾಶಕ್ಕೆ ತಾವೇ ಕಾರಣರಾಗುತ್ತಾರೆ. ದುಷ್ಟರಿಗೆ ಆತ್ಮನಾಶದ ಹಾದಿಯಂತೂ ಇದ್ದೇ ಇದೆ. ಆದರೆ ಸಜ್ಜನರ ಮಾತು ಬೇರೆ. ಸಜ್ಜನರಿಗೆ, ಭಗವದ್ಭಕ್ತರಿಗೆ ಬರುವ ಕಷ್ಟ ಒಂದು ಮನ್ವಂತರವನ್ನೇ ಸೃಷ್ಟಿಮಾಡಿಬಿಡುತ್ತದೆ. ಸೀತೆ ಪಟ್ಟ ಕಷ್ಟದಿಂದ ರಾಮಾವತಾರದ ಮಹಿಮೆ ತಿಳಿದರೆ, ದ್ರೌಪದಿಯಿಂದ ಕೃಷ್ಣಾವತಾರದ ಮಹಿಮೆ ತಿಳಿಯಿತು.

ವಸ್ತುಸ್ಥಿತಿ ಏನೆಂದರೆ ಕಷ್ಟ-ಸುಖ ಎರಡೂ ಒಂದೇ ನಾಣ್ಯದ ಎರಡು ಮುಖವಿದ್ದಂತೆ. ಸುಖದ ದಿನಗಳು ಲೆಕ್ಕಕ್ಕೆ ಸಿಗುವುದಿಲ್ಲ. ಕಷ್ಟ ಬಂದಾಗ ಮಾತ್ರ ನಮ್ಮ ವ್ಯಕ್ತಿತ್ವದ ನಿಜವಾದ ಪರಿಚಯವಾಗುತ್ತದೆ. ಕಷ್ಟಗಳು ಬಂದಾಗ ಏನು ಮಾಡಬೇಕು ಎಂಬುದನ್ನು ಈ ಕೆಳಗಿನ ಮಾತುಗಳು ಚೆನ್ನಾಗಿ ತಿಳಿಸುತ್ತವೆ: "ಕಷ್ಟದಲ್ಲಿದ್ದೀರಿ ಎಂದು ಕಂಡಕಂಡವರ ಮುಂದೆ ಅಳುಮುಖದ ದರ್ಶನ ಕೊಡಲೇಬೇಡಿ. ಅಳು ಬರುವ ಹಾಗಿದ್ದರೆ ಮನೆಯಲ್ಲೇ ಕುಳಿತು ಯಾರಿಗೂ ಕಾಣದಂತೆ ಅತ್ತುಬಿಡಿ. ಹಲ್ಲು ಕಚ್ಚಿ, ಬಾಯಿಮುಚ್ಚಿ, ನಾಲಿಗೆ ಒಳಗೆ ಹಾಕಿ ಕಷ್ಟವನ್ನು ನುಂಗಿಕೊಳ್ಳಿ. ಆಗ ಎಂಥ ಆತ್ಮಸ್ಥೈರ್ಯ ನಿಮ್ಮಲ್ಲಿ ಬೆಳೆದಿರುತ್ತದೆಂದರೆ ನಿಮಗೆ ನೀವೇ ಆಶ್ಚರ್ಯ ಪಡುವಿರಿ." ಎಂಥ ಅದ್ಭುತ ಮಾತುಗಳಿವು!

ತಾಯಿ ಶಾರದೆಯ ಮಾತುಗಳು ನೊಂದವರಿಗೆ ಅದೆಷ್ಟು ತಂಪನ್ನೆರೆಯುತ್ತವೆ! "ಕಷ್ಟ, ಸುಖಗಳು ಸೇತುವೆಯ ಕೆಳಗೆ ಹರಿಯುವ ನೀರಿನಂತೆ, ಶಾಶ್ವತವಾಗಿ ನಿಂತಲ್ಲೆ ನಿಂತಿರುವುದಿಲ್ಲ." ಈ ಮಾತುಗಳಲ್ಲಿ ತನ್ನ ಸಂತಾನಕ್ಕೆ ಆ ತಾಯಿ ಅದೆಷ್ಟು ಧೈರ್ಯ ತುಂಬುತ್ತಾರೆ! ಅನುಭವದಿಂದ ಹೊರಬಂದ ಮಾತಲ್ಲವೇ? ಅದಕ್ಕೇ ಅಷ್ಟು ಹೃದ್ಯವಾಗಿದೆ.

ಭಗವತ್ಕೃಪೆ, ಸಜ್ಜನಿಕೆ ನಮ್ಮಲ್ಲಿ ಇದ್ದದ್ದೇ ಆದರೆ ಎಂಥ ಕಷ್ಟದ ಪರಿಸ್ಥಿತಿಯಲ್ಲೂ ನಾವು ಉತ್ತೀರ್ಣರಾಗುವುದರಲ್ಲಿ ಸಂದೇಹವೇ ಇಲ್ಲ.

*